ಕರ್ನಾಟಕ ಸರ್ಕಾರ

ತಹಶೀಲ್ದಾರರು ಹೊಸಪೇಟೆ ಇವರ ನ್ಯಾಯಾಲಯದ ನಡವಳಿಗಳು

ವಾದಿ	ಪ್ರತಿವಾದಿ
ಕೆ.ಮಹಬೂಬ ಬಾಷಾ ತಂದೆ ದಿ.ಕೆ.ಮಹಮದ್ ಗೌಸ್	ಕಂದಾಯ ನಿರೀಕ್ಷಕರು ಮರಿಯಮ್ಮನಹಳ್ಳಿ

ಪೀಠಿಕೆ:–

ಹೊಸಪೇಟೆ ಹೋಬಳಿ ಸಂಕಲಾಪುರ ಗ್ರಾಮದ ಸ.ನಂ 104/1 ವಿ. 0.04.50 ಎಕ್ರೆ. ಸ.ನಂ 105/1ಎ3 ವಿ 0.03 ಸೆಂ. ಜಮೀನುಗಳ ಪಹಣಿಗಳಲ್ಲಿ ನಮೂದಾಗಿರುವ ಮೈನರ ಗಾರ್ಡಿಯನ್ ತೆಗೆಯಲು ಶ್ರೀ ಕೆ.ಮಹಬೂಬ ಬಾಷಾ ತಂದೆ ದಿ.ಕೆ.ಮಹಮದ್ ಗೌಸ್ ಇವರು ಅರ್ಜಿ ಸಲ್ಲಿಸಿರುತ್ತಾರೆ. ಹಕ್ಕು ಬದಲಾವಣಿ ಸಂಖ್ಯೆ ಹೆಚ್ 29/2015–16 ರ ದಿನಾಂಕ 25–1–2016 ರಂದು ಚೆಕಲಿಸ್ಟ ಮತ್ತು ನಮೂನೆ 21 ತಯಾರಾಗಿದ್ದು ಲಗತ್ತು ಮತ್ತು ಅಗತ್ಯ ದಾಖಲೆಗಳ ವಿವರಗಳ ಹಕ್ಕು ಬದಲಾವಣಿ ವಿವರಗಳೂಂದಿಗೆ ಹಕ್ಕು ಬದಲಾವಣಿ ಪ್ರಕರಣವನ್ನು ಕಂದಾಯ ನಿರೀಕ್ಷಕರು ಹೊಸಪೇಟೆ ಇವರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿತ್ತು.

ಹಕ್ಕು ಬದಲಾವಣಿ ಆದೇಶದಲ್ಲಿ ನಮೂನೆ 21 ರ ನೋಟಿಸಿಗೆ ಆಸಕ್ತರಿಗೆ ಸಹಿ ಮಾಡಿರುತ್ತಾರೆ. ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗಿರುವುದಿಲ್ಲ ಆದರೆ ಚಾಲ್ತಿ ಪಹಣಿಗಳಲ್ಲಿ ವಾದಿಗಳ ಇಬ್ಬರ ಹೆಸರುಗಳಿದ್ದು ಚೆಕ್‌ಲೀಸ್ಟ್–ನಮೂನೆ–12, ನಮೂನೆ–21 ಗಳಲ್ಲಿ ಹಕ್ಕು ಬದಲಾವಣೆ ಪಡೆಯುವವರ ವಿವರಗಳಲ್ಲಿ ಕೇವಲ ಕೆ.ಮಹಬೂಬ ಬಾಷಾ ತಂದೆ ದಿ.ಕೆ.ಮಹಮದ್ ಗೌಸ್ ಇವರ ಹೆಸರು ಮಾತ್ರ ನಮೂದಿಸಿರುವುದು ತಪ್ಪಾಗಿರುವುದು ಕಂಡು ಬಂದ ಕಾರಣ ಹಾಗೂ ಅರ್ಜಿದಾರರು ಸಲ್ಲಿಸಿದ ದಾಖಲೆಗಳಾದ ಪಡಿತರ ಚೀಟಿ, ಚುನಾವಣೆ ಗುರ್ತಿನ ಚೀಟಿ ಹಾಗೂ ಎಸ್ ಎಸ್ ಎಲ್ ಸಿ ಪ್ರಮಾಣ ಪತ್ರಗಳಲ್ಲಿ ಹೆಸರು ಕೆ.ಮಾಬಾಷಾ ತಾಯಿ ರಮೀಜಾಬಿ ಎಂದು ನಮೂದಾಗಿರುವ ಪ್ರಯುಕ್ತ ಪಹಣಿಗಳಲ್ಲಿ ಹಾಗೂ ಇನ್ನಿತರೆ ದಾಖಲೆಗಳಲ್ಲಿ ಪಟ್ಟಾದಾರರ ಹೆಸರು ವ್ಯತ್ಯಾಸವಿರುವ ಪ್ರಯುಕ್ತ ಕಂದಾಯ ನಿರೀಕ್ಷಕರು ಹೊಸಪೇಟೆ ಇವರು ಹಕ್ಕು ಬದಲಾವಣೆಯನ್ನು ತಿರಸ್ಕರಿಸಿ ಮುಂದಿನ ವಿಚಾರಣೆಗೆ ತಹಶೀಲ್ದಾರರಿಗೆ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣದಲ್ಲಿ ಸಂಬಂಧಿಸಿದವರಿಗೆ ನೋಟೀಸುಗಳನ್ನು ಜಾರಿಗೊಳಿಸಿ ಪ್ರಕರಣದಲ್ಲಿ ವಿಚಾರಣೆಯನ್ನು ದಿನಾಂಕ 02–06–2016 ರಂದು ಪ್ರಾರಂಬಿಸಿ ದಿನಾಂಕ 14-07-2016 ರಂದು ಅಂತಿಮಗೊಳಿಸಲಾಯಿತು. ಪ್ರಕರಣದಲ್ಲಿ ವಿಚಾರಣೆಗೆ ಕರೆಯಲಾಗಿ ವಾದಿಗಳು ವಿಚಾರಣೆಯಲ್ಲಿ ಹಾಜರಾಗಿರುತ್ತಾರೆ. ಶ್ರೀ ಕೆ.ಮಹಬೂಬ ಬಾಷಾ ತಂದೆ ದಿ.ಕೆ.ಮಹಮದ್ ಗೌಸ್ ಇವರು ವಯಸ್ಸಿನ ಬಗ್ಗೆ ಸೂಕ್ತ ದಾಖಲೆ ಸಲ್ಲಿಸಿರುತ್ತಾರೆ. ಈ ದಾಖಲೆಗಳನ್ನು ಪರಿಶೀಲಿಸಲಾಗಿ ಹಾಗೂ ಅವರ ಕೋರಿಕೆಯಂತೆ ಮೈನರ್ ಗಾರ್ಡಿಯನ್ ಮಾತ್ರ ತೆಗೆದು ಪಡಿತರ ಚೀಟಿ, ಚುನಾವಣೆ ಗುರ್ತಿನ ಚೀಟಿ ಹಾಗೂ ಎಸ್‌ಎಸ್‌ಎಲ್‌ಸಿ ಪ್ರಮಾಣ ಪತ್ರಗಳಲ್ಲಿ ನಮೂದಿರುವಂತೆ ಪಟ್ಟಾದಾರರ ಹೆಸರನ್ನು ಕೆ.ಮಾಬಾಷಾ ತಾಯಿ ಕೆ.ರಮೀಜಾ ಬಿ ಎಂದು ಹಕ್ಕುಬದಲಾವಣೆ ಮಾಡವಂತೆ ಹೇಳಿಕೆ ನೀಡಿರುತ್ತಾರೆ. ಹಾಗೂ ಅರ್ಜಿದಾರರ ತಾಯಿ ಕೆ.ರಮೀಜಾಬಿ ಹಾಜರಾಗಿ ಪಹಣಿಯಲ್ಲಿ ನಮೂದಿರುವ ಗಾರ್ಡಿಯನ್ ಆದ ಅವರ ಹೆಸರನ್ನು ತೆಗದು ಅವರ ಮಗನಾದ ಕೆ.ಮಾಬಾಷಾ ತಾಯಿ ಕೆ.ರಮೀಜಾ ಬಿ ಎಂದು ನಮೂದಿಸಲು ಒಪ್ಪಿಗೆ ಹೇಳಿಕೆ ನೀಡಿರುತ್ತಾರೆ. ಕಾರಣ ಈ ಕೆಳಗಿನಂತೆ.

ಸಂ/ಕಂ/ಪಹಣಿ/ವಿವಾದ/ 12 /2016–17 **ದಿನಾಂಕ:– 1–9–2016**

ಆದೇಶ

ಪ್ರಕರಣದ ಹಿನ್ನಲೆ ವಾಸ್ತವಂಶ ಹಾಗೂ ದಾಖಲೆಗಳನ್ವಯ ಹೊಸಪೇಟೆ ಹೋಬಳಿ ಸಂಕಲಾಪುರ ಗ್ರಾಮದ ಸ.ನಂ 104/1 ವಿ. 0.04.50 ಸೆಂ ಸ.ನಂ 105/1ಎ3 ವಿ 0.03 ಸೆಂ. ಜಮೀನುಗಳಲ್ಲಿ ಕೆ.ಮಾಬಾಷಾ ತಾಯಿ ಕೆ.ರಮೀಜಾ ಬಿ ಎಂದು ಹಕ್ಕುಬದಲಾವಣೆ ಮಾಡವಂತೆ ಹಕ್ಕು ಬದಲಾವಣಿ ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ 1–9–2016 ರಂದು ತೆರೆದ ನ್ಯಾಯಾಲಯದಲ್ಲಿ ಉಕ್ತ ಲೇಖನ ನೀಡಿ ಬಹಿರಂಗವಾಗಿ ಘೋಷಿಸಲಾಯಿತು.

ತಹಶೀಲ್ದಾರರು, ಹೊಸಪೇಟೆ

ಗೆ,
ವಾದಿ ಮತ್ತು ಪ್ರತಿವಾದಿಗಳಿಗೆ
ಕಂದಾಯ ನಿರೀಕ್ಷಕರು, ಹೊಸಪೇಟೆ ಮತ್ತು ಭೂಮಿ ಕೇಂದ್ರ